ವಿಜಯ ಕರ್ನಾಟಕ 24.11.17

## ಕುಲಪತಿ ಪ್ರೊ. ಜಾಫೆಟ್ ಸಲಹೆ | ಎರಡು ಪುಸ್ತಕಗಳ ಲೋಕಾರ್ಪಣೆ

# ಪುಸ್ತಕ ಅಧ್ಯಯನದಿಂದ ಜ್ಞಾನ ವಿಸ್ತರಿಸಿಕೊಳ್ಳಿ

■ **ವಿಕ ಸುದ್ದಿಲೋಕ** ಬೆಂಗಳೂರು



ಬೆಂಗಳೂರು ಕೇಂದ್ರ ವಿವಿ ಕುಲಪತಿ ಪ್ರೊ. ಜಾಫೆಟ್ ಅವರು ಪುಸ್ತಕಗಳನ್ನು ಬಿಡುಗಡೆಗೊಳಿಸಿದರು. ಎನ್.ಎಸ್. ವಿಶ್ವನಾಥ್ ಮತ್ತು ಜಂಟಿ ನಿರ್ದೇಶಕ ಪ್ರೊ. ಸುಧೀಂದ್ರ ಗಾರ್ಗೇಶ ಮೊದಲಾದವರಿದ್ದರು.

ವಿದ್ಯಾರ್ಥಿಗಳು ತಮ್ಮ ಜ್ಞಾನಮಟ್ಟವನ್ನು ವಿಸ್ತರಿಸಿಕೊಳ್ಳಲು ಪುಸ್ತಕಗಳ ಅಧ್ಯಯನ ಅತ್ಯಗತ್ಯ ಎಂದು ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಜಾಫೆಟ್ ಹೇಳಿದರು.

ಎಂ.ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಮತ್ತು ಸದರ್ನ್ ಎಕನಾಮಿಸ್ಟ್ ಸ್ಟಡಿ ಸರ್ಕಲ್ ವತಿಯಿಂದ ಭಾರ ತೀಯ ವಿದ್ಯಾ ಭವನದಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ವಿ. ವಿಜಯ ಲಕ್ಷ್ಮೀ ಅವರ 'ಲೀಡರ್‌ಶಿಪ್' ಮತ್ತು ಡಾ. ಉಷಾ ರಾವ್ ಅವರ 'ಗೀತ ಸುಗೀತ: ಎ ಸೈಕಲಾಜಿಕಲ್ ಇನ್‌ಫರೆನ್ಸ್' ಪುಸ್ತಕಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

**ಭಾರತೀಯ ವಿದ್ಯಾಭವನದಲ್ಲಿ ಕಾರ್ಯಕ್ರಮ**

''ಇಂದು ಬಿಡುಗಡೆಯಾಗಿರುವ ಈ ಪುಸ್ತಕಗಳು ವಿದ್ಯಾರ್ಥಿಗಳಿಗೆ ಮೌಲ್ಯಗಳನ್ನು ಬೆಳೆಸಿಕೊಳ್ಳಲು ಸಹಕಾರಿಯಾಗಲಿದ್ದು, ನಾಯಕತ್ವ ಗುಣ ಬೆಳೆಸಿಕೊಳ್ಳುವ ಮೂಲಕ ದೇಶವನ್ನು ಮುನ್ನಡೆಸುವ ನಿಟ್ಟಿನಲ್ಲಿ ಯುವ ಸಮೂಹ ಸಜ್ಜಾಗಬೇಕು. ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳ ಜತೆಗೆ ಇತರೆ ಪುಸ್ತಕಗಳ ಅಧ್ಯಯನದ ಕಡೆಗೂ ವಿದ್ಯಾರ್ಥಿಗಳು ಗಮನಹರಿಸಬೇಕು'' ಎಂದ ಅವರು, 'ಭಾರತೀಯ ಸಂಸ್ಕೃತಿ ಮತ್ತು ಸಾಮಾಜಿಕ ಚಿಂತನೆಗಳನ್ನು ಬೆಳೆಸುವಲ್ಲಿ ಭಾರತೀಯ ವಿದ್ಯಾಭವನದ ಸಂಸ್ಥಾಪಕ ಕೆ.ಎಂ. ಮುನ್ಷಿ ಅವರ ಕೊಡುಗೆ ಅಪಾರ'' ಎಂದು ಸ್ಮರಿಸಿದರು.

ಇದೇ ವೇಳೆ ''ಬೆಂಗಳೂರು ಕೇಂದ್ರ ವಿಶ್ವವಿದ್ಯಾಲಯವನ್ನು 1 ಬ್ರ್ಯಾಂಡ್ ಆಗಿ ಅಭಿವೃದ್ಧಿಪಡಿಸುವ ಅಗತ್ಯವಿದೆ. ಐಟಿ-ಬಿಟಿ ಹಬ್ ಖ್ಯಾತಿಯೊಂದಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೈಟೆಕ್ ಸಿಟಿ ಎಂದೇ ಹೆಸರು ಪಡೆದಿರುವ ಬೆಂಗಳೂರಿನ ಗರಿಮೆ ಹೆಚ್ಚಿಸುವಲ್ಲಿ ವಿವಿ ಪ್ರಮುಖ ಪಾತ್ರ ವಹಿಸುತ್ತದೆ. ಹೀಗಾಗಿ ಭವಿಷ್ಯದಲ್ಲಿ ಇದನ್ನು ಮಾದರಿ ವಿವಿಯನ್ನಾಗಿ ಬೆಳೆಸಬೇಕಿದೆ'' ಎಂದರು.

ಎಂಪಿಬಿಐಎಂನ ನಿರ್ದೇಶಕ ಡಾ. ಎನ್.ಎಸ್. ವಿಶ್ವನಾಥ್ ಮತ್ತು ಜಂಟಿ ನಿರ್ದೇಶಕ ಪ್ರೊ. ಸುಧೀಂದ್ರ ಗಾರ್ಗೇಶ ಅವರು ಪುಸ್ತಕಗಳ ಪರಿಚಯ ಮಾಡಿಕೊಟ್ಟರು. ಕೇರಳದ ಚಿನ್ಮಯ್ ಇನ್‌ಟಲ್ ಫೌಂಡೇಷನ್‌ನ ನಿರ್ದೇಶಕ ಡಾ.ಎ.ರಾಮಸ್ವಾಮಿ ಐಯ್ಯಂಗಾರ್ ಉಪಸ್ಥಿತರಿದ್ದರು.

---

ವಿಶ್ವವಾಣಿ 24.11.2017

# ಇಂಗ್ಲಿಷ್ ಮಾತನಾಡುವವರು ಶೇ.2ರಷ್ಟು ಮಾತ್ರ



ಲೇಖಕಿ ಡಾ.ವಿ.ವಿಜಯಲಕ್ಷ್ಮಿ ಅವರ 'ಲೀಡರ್‌ಶಿಪ್' ಹಾಗೂ ಡಾ. ಉಷಾ ರಾವ್‌ರ 'ಗೀತ ಸುಗೀತ – ಎ ಸೈಕಾಲಜಿಕಲ್ ಇನ್ಫೆರೆನ್ಸ್' ಪುಸ್ತಕವನ್ನು ಕುಲಪತಿ ಪ್ರೊ.ಎಸ್.ಜಾಫೆಟ್ ಬಿಡುಗಡೆಗೊಳಿಸಿದರು.

**ಬೆಂಗಳೂರು:** ಭಾರತದಲ್ಲಿ ಆಂಗ್ಲ ಭಾಷೆ ಮಾತನಾಡಲು, ಓದಲು ಹಾಗೂ ಬರೆಯಲು ಬರುವವರ ಸಂಖ್ಯೆ ಶೇ.2 ರಷ್ಟು ಮಾತ್ರವಿದೆ. ಸ್ಥಳೀಯ ರಾಜ್ಯಗಳ ಜನತೆ ತಮ್ಮ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದಾರೆ ಎಂದು ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ಜಾಫೆಟ್ ಎಂದು ತಿಳಿಸಿದರು.

ಎಂ.ಪಿ.ಬಿರ್ಲಾ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ವತಿಯಿಂದ ಗುರುವಾರ ನಗರದಲ್ಲಿ ನಡೆದ ಡಾ.ವಿ.ವಿಜಯಲಕ್ಷ್ಮಿ ಅವರ 'ಲೀಡರ್‌ಶಿಪ್' ಹಾಗೂ ಡಾ.ಉಷಾ ರಾವ್‌ರ 'ಗೀತ ಸುಗೀತ–ಎ ಸೈಕಾಲಜಿಕಲ್ ಇನ್ಪೆರೆನ್ಸ್' ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿ, ಇಂದಿನ ವಿದ್ಯಾರ್ಥಿಗಳು ಹೆಚ್ಚಾಗಿ ವಿದ್ಯಾಭ್ಯಾಸದಲ್ಲಿ ತೊಡಗಿದ್ದು, ಕೇವಲ ಶೇ.10 ರಷ್ಟು ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ ಎಂದು ಬೇಸರ ವ್ಯಕ್ತಪಡಿಸಿದರು.

ಭಾರತೀಯ ವಿದ್ಯಾಭವನ ವಿದ್ಯಾರ್ಥಿಗಳಿಗೆ ಉತ್ತಮ ಜ್ಞಾನ ಒದಗಿಸುತ್ತಿದೆ. ವಿದ್ಯಾರ್ಥಿಗಳಲ್ಲಿ ಉತ್ತಮ ಶೈಕ್ಷಣಿಕ ವಾತಾವರಣ ಹಾಗೂ ಬೌದ್ಧಿಕ ಶಕ್ತಿ ಬೆಳೆಸುವಂತಹ ವಾತಾವರಣ ಇಲ್ಲಿದೆ. ಸರಕಾರ ಬೆಂಗಳೂರು ವಿಶ್ವದ್ಯಾಲಯವನ್ನು ತ್ರಿಭಜನೆಗೊಳಿಸಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ಕೇಂದ್ರೀಯ ವಿಶ್ವವಿದ್ಯಾಲಯ ಹಾಗೂ ಬೆಂಗಳೂರು ಉತ್ತರ ವಿಶ್ವವಿದ್ಯಾಲಯಗಳನ್ನಾಗಿ ಮಾಡಿದೆ. ವಿದ್ಯಾರ್ಥಿಗಳ ವಿದ್ಯಾರ್ಜನೆಗೆ ಅನುಕೂಲವಾಗಲು ಈ ರೀತಿ ಒಳ್ಳೆಯ ಕೆಲಸ ಮಾಡಿದೆ ಎಂದರು ತಿಳಿಸಿದರು.

ಆರ್ಥಿಕ ತಜ್ಞೆ ಸುಶೀಲ ಸುಬ್ರಹ್ಮಣ್ಯ ಮಾತನಾಡಿ, ಭಾರತೀಯ ವಿದ್ಯಾಭವನದಲ್ಲಿ ನಾಲ್ಕು ವರ್ಷಗಳ ಹಿಂದೆ ಅರ್ಥಶಾಸ್ತ್ರ ಅಧ್ಯಯನ ಕೇಂದ್ರ ತೆರೆದಿದ್ದು, ಆರ್ಥಿಕತೆಯ ಕುರಿತು ಇತ್ತೀಚಿನ ಬದಲಾವಣೆ ಬಗ್ಗೆ ಮಾಹಿತಿ ನೀಡಲಾಗುತ್ತಿದೆ. ವಿದ್ಯಾರ್ಥಿಗಳು ಆರ್ಥಿಕ ಜ್ಞಾನವನ್ನು ಹೆಚ್ಚಿಸಿಕೊಂಡು ಆರ್ಥಿಕ ವಲಯಕ್ಕೆ ಉತ್ತಮ ಕೊಡುಗೆ ನೀಡಬೇಕು. ವಿದ್ಯಾರ್ಥಿ ಜೀವನದಲ್ಲಿ ಮೌಲ್ಯಯುತ ಶಿಕ್ಷಣ ಪಡೆದು ಸಮಾಜಕ್ಕೆ ಕೊಡುಗೆ ನೀಡಬೇಕು ಎಂದು ಸಂದೇಶ ನೀಡಿದರು.

ಕಾರ್ಯಕ್ರಮದಲ್ಲಿ ಎಸ್‌ಎಸ್‌ಎಂಆರ್‌ವಿ ಕಾಲೇಜಿನ ಪ್ರಾಂಶುಪಾಲ ಡಾ.ಎ.ರಾಮಸ್ವಾಮಿ ಐಯ್ಯಂಗಾರ್, ಭಾರತೀಯ ವಿದ್ಯಾಭವನದ ಅಧ್ಯಕ್ಷ ಎಂಜಿನಿಯರ್ ಎನ್.ರಾಮಾನುಜ, ಎಂ.ಪಿ.ಬಿರ್ಲಾ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ನಿರ್ದೇಶಕ ಡಾ.ಎನ್.ವಿ.ವಿಶ್ವನಾಥ್ ಇದ್ದರು.